10.50. ಎ. ಎಂ

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಜಪೇಯಿಯವರ ನೇತೃತ್ವದ ಸರ್ಕಾರದಲ್ಲಿ ನಮ್ಮ ರಾಜ್ಯದವರೊಬ್ಬರು ಕೇಂದ್ರದಿಂದ ವಾಣಿಜ್ಯ ಸಚಿವರಾಗಿದ್ದಾಗ ಚೈನಾ ರೇಷ್ಮೆಯನ್ನು ಆಮದು ಮಾಡಿಕೊಳ್ಳುವುದಕ್ಕೆ ಅವರು ತೆಗೆದುಕೊಂಡ ನೀತಿಯ ಬಗ್ಗೆ ಮಾನ್ಯ ಸಿಂಧ್ಯಾರವರಿಗೆ ಗೊತ್ತಿದೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಹಾಕಿರುವ ಪ್ರಶ್ನೆಗೆ ಸಂಬಂಧಪಡದ ವಿಚಾರವೇಕೆ?

ಶ್ರೀ ಎಸ್. ಎಸ್. ಪಾಟೀಲ್ : ಇದು ರೇಷ್ಮೆ ಬೆಳೆಯುತ್ತಿರತಕ್ಕಂಥ ರೈತರ ಪ್ರಶ್ನೆಯಾಗಿದೆ. ದಯವಿಟ್ಟು ಇದರಲ್ಲಿ ನಾವು ರಾಜಕೀಯ ಬೆರೆಸುವುದು ಬೇಡ. ಕೇಂದ್ರ ಸರ್ಕಾರದವರು ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಗುದ್ದಾಡುವುದು ಬೇಡ. ಇವೊತ್ತು ರೇಷ್ಮೆ ಬೆಳೆಯುತ್ತಿರುವ ರೈತರಿಗೆ ಇದ್ದುದರಲ್ಲಿ ನಾವೇನು ಸಹಾಯ ಮಾಡಬಹುದು ಮತ್ತು ಸರ್ಕಾರ ಏನು ಸಹಾಯ ಮಾಡಬಹುದು ಎಂಬ ಬಗ್ಗೆ ಚರ್ಚೆ ಮಾಡುವುದು ಅವಶ್ಯಕತೆ ಇದೆ.

ಶ್ರೀ ಎಂ ಮಹದೇವ : ಅಂಥ ರೈತರಿಗೆ ಏನು ಸಹಾಯ ಮಾಡಬಹುದು ಎಂಬ ಬಗ್ಗೆಯೇ ನಾವು ಇಂಥಿಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ವಿವರವನ್ನು ಕೊಟ್ಟಿದ್ದೇವೆ. ಇನ್ನೂ ಹೆಚ್ಚು ನಾನೇನು ಕೊಡಬೇಕು ಹೇಳಿ.

ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ : ಸರ್ಕಾರ ಖರೀದಿ ಮಾಡುತ್ತಿರುವ ದರಕ್ಕಿಂತ ಖಾಸಗಿಯವರು ಹೆಚ್ಚಿನ ದರದಲ್ಲಿ ರೇಷ್ಮೆಯನ್ನು ಖರೀದಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಆದರೆ ಬೆಳಗಾಂವ್ ಜಿಲ್ಲೆಯ ಗೋಕಾಕ್‌ನಲ್ಲಿ ಸರ್ಕಾರದ ದರಕ್ಕಿಂತ ಹೆಚ್ಚಿನ ದರದಲ್ಲಿ ರೇಷ್ಮೆಯನ್ನು ಖಾಸಗಿಯವರು ಖರೀದಿ ಮಾಡುತ್ತಿದ್ದಾರೆ. ಇದು ಗೊತ್ತಿದ್ದು ನಿಮ್ಮ ಇಲಾಖೆಯವರು ನಿಮಗೇ ತಪ್ಪು ಮಾಹಿತಿಯನ್ನು ಕೊಟ್ಟರೆ ನಾವೇನು ಮಾಡುವುದು. ನಿಮ್ಮ ಇಲಾಖೆಯವರು ಯಾರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಎಂಬ ಬ್ಗಗೆ ತಾವು ಗಮನಿಸಬೇಕು.

ಶ್ರೀ ಎಂ ಮಹದೇವ : ಹೆಚ್ಚಿನ ದರದಲ್ಲಿ ರೇಷ್ಮೆಯನ್ನು ಖಾಸಗಿಯವರು ಖರೀದಿ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲ. ತಾವೇನಾದರೂ ವಿವರ ಕೊಟ್ಟರೆ ಅದರ ಬಗ್ಗೆ ತನಿಖೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ.

ದೊಡ್ಡಬಳ್ಳಾಪುರದಲ್ಲಿ ನಿವೇಶನ ಹಂಚಿಕೆಯಲ್ಲಿ ಆಗಿರುವ ಅವ್ಯವಹಾರ

205 (1903) : ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದೊಡ್ಡಬಳ್ಳಾಪುರದ ನಗರಸಭೆಯು ನಿವೇಶನಗಳನ್ನು ಹಂಚುವಾಗ ಲೋಪದೋಷಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಇಲ್ಲ

(ಆ) ಉದ್ಭವಿಸುವುದಿಲ್ಲ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಎರಡು ಪ್ರಶ್ನೆಗಳಿಗೂ 'ಇಲ್ಲ' ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ದೊಡ್ಡಬಳ್ಳಾಪುರದಲ್ಲಿ ಸುಮಾರು 20 ಸಾವಿರ ರೇಷ್ಮೆ ಕೃಷಿ ಕಾರ್ಮಿಕರಿದ್ದಾರೆ. ಇವರಿಗೆ ನಿವೇಶನಗಳಿಲ್ಲ. ಸುಮಾರು ಮೂರ್ನಾಲ್ಕು ವರ್ಷಗಳ ಹಿಂದೆಯೇ ನಿವೇಶನಗಳನ್ನು ಹಂಚುತ್ತೇವೆಂದು ನಗರಸಭೆಯವರು ಹಣವನ್ನು ವಸೂಲು ಮಾಡಿದ್ದಾರೆ. ಆದರೆ ಒಬ್ಬರಿಗೂ ನಿವೇಶನವನ್ನು ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಇನ್ನು 20 ಎಕರೆ ಜಮೀನನ್ನು ಸರ್ಕಾರ ಮುನಿಸಿಪಾಲಿಟಿಗೆ ಕೊಟ್ಟಿದೆ ಮುನಿಸಿಪಾಲಿಟಿಯವರು ಆ ಜಮೀನುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಿಲ್ಲ. ಬಹಳ ಪ್ರಬಾವಶಾಲಿಗಳಾದವರು ಆ ಜಮೀನಿನ ಬಗ್ಗೆ ಕೋರ್ಟ್‌ಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಮುನಿಸಿಪಾಲಿಟಿಯವರು ಸ್ಟೇ ವೆಕೇಟ್ ಮಾಡಿಸುವುದಕ್ಕೆ ಉದ್ದೇಶಪೂರ್ವಕವಾಗಿ ಕ್ರಮವನ್ನು ತೆಗೆದುಕೊಂಡಿಲ್ಲ. ಆದ ಕಾರಣ ಇವುಗಳ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎಂಬ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ದೊಡ್ಡಬಳ್ಳಾಪುರದ ನಗರಸಭೆಯು ನಿವೇಶನಗಳನ್ನು ಹಂಚುವಾಗ ಲೋಪದೋಷಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ 1979ರಲ್ಲಿಯೇ 447 ನಿವೇಶನಗಳನ್ನು ಹಂಚಿದ್ದು ಯಾವ ಲೋಪದೋಷಗಳು ಇಲ್ಲ. ಇವುಗಳ ಪೊಸಿಶನ್ ಸರ್ಟಿಫಿಕೇಟ್‌ನ್ನೂ ಕೂಡ ಕೊಟ್ಟಿದ್ದಾರೆ. ಇನ್ನು 39 ಎಕರೆಯಲ್ಲಿ ಮಾಡಿರುವ ಸೈಟ್ ಬಗ್ಗೆ ಹೇಳುವುದಾದರೆ ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಕೆಲವರು ಕೋರ್ಟ್‌ಗೆ ಹೋಗಿದ್ದಾರೆ. ಇದರಲ್ಲಿ ವಿಶೇಷವಾಗಿ ಒಂದು ಎಕರೆ 20 ಗುಂಟೆಯಲ್ಲಿ ಸುಮಾರು 100 ಸೈಟ್‌ಗಳನ್ನು ಮಾಡಿದ್ದಾರೆ. ಅದನ್ನು ಹಂಚಿಯೂ ಬಿಟ್ಟಿದ್ದಾರೆ. ಇನ್ನು ಒಂದು ಎಕರೆ 32 ಗುಂಟೆ ವಿಚಾರಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದಾರೆ. ಇದಲ್ಲದೆ 17 ಎಕರೆ ಭೂಮಿ ವಿಚಾರದಲ್ಲೂ ಕೋರ್ಟ್‌ನಲ್ಲಿ ವಿಚಾರಣೆ ಪೆಂಡಿಂಗ್ ಇದೆ. ಇದಲ್ಲದೇ ಒಂದು ಎಕರೆ ಮೂರು ಗುಂಟೆಯಲ್ಲಿ ಈಗಾಗಲೇ ಗುಡಿಸಲುಗಳಿವೆ. ಅದನ್ನು ಎವಿಕ್ಷನ್ ಮಾಡಬೇಕೋ ಅಥವಾ ಆ ಗುಡಿಸಲಿನಲ್ಲಿರುವವರಿಗೇ ಕೊಡಬೇಕೋ ಎಂಬ ಬಗ್ಗೆ ಶಾಸಕರಾದ ನೀವೇ ಆಶ್ರಯ ಸಮಿತಿಯಲ್ಲಿ ತೀರ್ಮಾನ ಮಾಡಬೇಕು. ಇನ್ನು 13 ಎಕರೆ ಪ್ರದೇಶ ಬಹಳ ತಗ್ಗಿನಲ್ಲಿರುವುದರಿಂದ ಅದನ್ನು ಡೆವಲಪ್ ಮಾಡುವುದಕ್ಕೆ ಹೆಚ್ಚು ಹಣ ಖರ್ಚಾಗುತ್ತದೆಂದು ಹೇಳಿ ಅದನ್ನು ಕೂಡ ಪೆಂಡಿಂಗ್‌ನಲ್ಲಿಟ್ಟಿದ್ದಾರೆ. ಇದಲ್ಲದೇ ಸುಮಾರು 39 ಎಕರೆ 16 ಗುಂಟೆಯೊಳಗೆ ಮತ್ತು 3 ಎಕರೆ 12 ಗುಂಟೆಯೊಳಗೆ ಆಗತಕ್ಕಂಥ ನಿವೇಶನಗಳನ್ನು ಆಶ್ರಯ ಸಮಿತಿ ರಚನೆಯಾದ ತಕ್ಷಣ ಶಾಸಕರ ಅಧ್ಯಕ್ಷತೆಯೋಳಗೆ ನಿವೇಶನಗಳನ್ನು ಹಂಚತಕ್ಕಂಥ ಕೆಲಸವನ್ನು ಮಾಡಬಹುದು. ಇದರೊಳಗೆ ಅವ್ಯವಹಾರ ಆಗಿರತಕ್ಕಂಥ ವಿಷಯ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ವಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಆರೇಳು ವರ್ಷಗಳ ಹಿಂದೆಯೇ ಸುಮಾರು 20 ರಿಂದ 30 ಎಕರೆ ಜಮೀನನ್ನು ನಗರಸಭೆಗೆ ಸರ್ಕಾರ ಕೊಟ್ಟಿದೆ. ಬಹಳ ಪ್ರಭಾವಶಾಲಿ ವ್ಯಕ್ತಿಗಳು ಈ ಜಮೀನಿನ ಮೇಲೆ ಕೋರ್ಟ್‌ನಲ್ಲಿ ಸ್ಟೇ ತಂದಿದ್ದಾರೆ. ಇದನ್ನು ವೆಕೇಟ್ ಮಾಡಿಸಲು ಸರ್ಕಾರ ಒಬ್ಬ ವಕೀಲರನ್ನಿಟ್ಟು ಕ್ರಮ ತೆಗೆದುಕೊಳ್ಳಲು ಅವಕಾಶವಿದ್ದರೂ ಯಾವ ವಿಧವಾದ ಕ್ರಮವನ್ನೂ ತೆಗೆದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ 200 ರಿಂದ 300 ನಿವೇಶನಗಳನ್ನು ಬಡವರಿಗೆ ಹಂಚಿದ್ದಾರೆ. ಆದರೆ ಯಾರಿಂದ ಹಣ ವಸೂಲಿ ಮಾಡಿಕೊಂಡಿದ್ದಾರೆ ಅಂಥವರಿಗೆ ಇದುವರೆಗೂ ನಿವೇಶನವನ್ನು ಕೊಟ್ಟಿಲ್ಲ. ಸ್ಟೇ ವೆಕೇಟ್ ಮಾಡಿಸುವುದಕ್ಕೆ ಹಾಗೂ ಬಡವರಿಗೆ ನಿವೇಶನ ಕೊಡುವುದಕ್ಕೆ ಸರ್ಕಾರ ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ :- ಈಗಾಗಲೇ 447 ನಿವೇಶನಗಳಿಗೆ ಹಣವನ್ನು ತೆಗೆದುಕೊಂಡಿರುವುದನ್ನು ನಾನು ಒಪ್ಪುತ್ತೇನೆ. 20" x 30" ಅಳತೆಯ ನಿವೇಶನಗಳಿಂದು ಮಾಡಿ ಜಿಲ್ಲಾಧಿಕಾರಿಗಳು ಲಾಟರಿ ಸಿಸ್ಟಂ ಮೂಲಕ ಬಡವರಿಗೆ ಈಗಾಗಲೇ ನಿವೇಶನವನ್ನು ಹಂಚಿಕೆ ಮಾಡಿದ್ದಾರೆ. ಈ ಬಡವರಿಗೆ ನಾಮಿನಲ್ ಛಾರ್ಜ್ ಎಂದು ಮಾಡಿದ್ದಾರೆ. 1979ರಲ್ಲಿ ಹಂಚಿರುವ 447 ನಿವೇಶನಗಳಿಗೆ ನಾಮಿನಲ್ ಛಾರ್ಜ್ ಎಂದು ಹಣವನ್ನು ಕಲೆಕ್ಟ್ ಮಾಡಿದ್ದಾರೆ. ಆದರೆ ಇದರಲ್ಲಿ ಮಾತ್ರ ಯಾವುದೇ ರೀತಿಯಿಂದ ಹಣವನ್ನು ಕಲೆಕ್ಟ್ ಮಾಡಿಲ್ಲ. ಒಂದು ವೇಳೆ ಹಣವನ್ನು ಕಲೆಕ್ಟ್ ಮಾಡಿರುವ ಬಗ್ಗೆ ತಾವು ನಿದರ್ಶನವನ್ನು ನನಗೆ ಕೊಟ್ಟರೆ ಅದರ ಬಗ್ಗೆ ಎನ್‌ಕ್ವೈರಿಯನ್ನು ಮಾಡಿಸುತ್ತೇನೆ.

ಶ್ರೀ ವಿ. ಕೃಷ್ಣಪ್ಪ : ಈಗಾಗಲೇ 447 ಸೈಟ್‌ಗಳನ್ನು ಹಂಚಿ ಕೊಟ್ಟುಬಿಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಮೊನ್ನೆ ಅಲ್ಲಿಗೆ ಹೋಗಿ ವೆಕೇಟ್ ಮಾಡಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಇಲ್ಲಿ ಕೆಲವು ಜನರು ಆರ್. ಸಿ. ಸಿ. ಮನೆಗಳನ್ನು ಕಟ್ಟುಬಿಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಸರ್ಕಾರಿ ವಕೀಲರನ್ನಿಟ್ಟು ಆದಷ್ಟು ಬೇಗ ಡಿಸ್‌ಪೋಸಲ್ ಮಾಡಿಸಬೇಕು ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಪ್ರಕಾರ ನಮ್ಮ ಸರ್ಕಾರಿ ವಕೀಲರಿಂದ ತ್ವರಿತಗತಿಯಿಂದ ಇದರ ಬಗ್ಗೆ ನಿರ್ಣಯ ಆಗುವಂಥ ರೀತಿಯಲ್ಲಿ ನಾನು ಪ್ರಯತ್ನ ಮಾಡುತ್ತೇನೆ. ಆದಷ್ಟು ಬೇಗ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಬಿಜಾಪುರ, ಬಸವನಬಾಗೇವಾಡಿ, ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗಿರುವ ಕುರಿತು

207 (1584) : ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬಿಜಾಪುರ, ಬಸವನ ಬಾಗೇವಾಡಿ, ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಲ್ಲಿನ ಅಂತರ್ಜಲಮಟ್ಟ ಕೆಳಗಡೆ ಹೋಗಿದೆ ಎಂದು ಸದರಿ ತಾಲ್ಲೂಕುಗಳನ್ನು ಬೂದು ಮಿಶ್ರಿತ ಮತ್ತು